ಸ್ಥಾಪನೆ : 1938 ದೂರವಾಣಿ : 080–22860125
29580125

**ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ**

**ನೋಂದಣಿ ಸಂಖ್ಯೆ : 437–ಎ.ಆರ್.ದಿನಾಂಕ : 14.10.1938**
**ಮೊದಲನೇ ಮಹಡಿ, ಹಳೆಯ ಕೆ.ಜಿ.ಐ.ಡಿ ಕಟ್ಟಡ, ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು–560 001.**
**e-mail Id : jdmpcsl@gmail.com Website : http://www.jdmcs.in**

**ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬೆಂಗಳೂರು ಈ ಸಂಘದ ಆಡಳಿತ ಮಂಡಳಿಗೆ ಚುನಾವಣೆಯನ್ನು ದಿನಾಂಕ 22.09.2024ನೇ ಭಾನುವಾರದಂದು ಬೆಳಿಗ್ಗೆ 09:00 ರಿಂದ ಸಾಯಂಕಾಲ 04.00 ಘಂಟೆವರೆಗೆ ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ, ನಂ.28, ಸಿಲ್ವರ್ ಜ್ಯೂಬಿಲಿ ಬಿಲ್ಡಿಂಗ್, ರೇಸ್ ಕೋರ್ಸ್ ಅಡ್ಡ ರಸ್ತೆ, ಹಳೆಯ ಜೆ.ಡಿ.(ಎಸ್) ಕಛೇರಿ ಹತ್ತಿರ, ಆನಂದ್ ರಾವ್ ಸರ್ಕಲ್, ಬೆಂಗಳೂರು–560009 ಈ ವಿಳಾಸದಲ್ಲಿ ಚುನಾವಣೆ ನಡೆಸುವ ಸಂಬಂಧ ರಿಟರ್ನಿಂಗ್ ಅಧಿಕಾರಿಗಳು ಹೊರಡಿಸಿರುವ ಚುನಾವಣಾ ವೇಳಾಪಟ್ಟಿಯನ್ನು ಈ ಪತ್ರಕ್ಕೆ ಲಗತ್ತಿಸಿ ಕಳುಹಿಸಿದೆ.**

**ದಿನಾಂಕ : 02.09.2024** **ಸಹಿ/–**
**ಸ್ಥಳ : ಬೆಂಗಳೂರು** **(ಲತಾ ಕೆ. ಎಂ.)**
ವ್ಯವಸ್ಥಾಪಕರು / ವೇತನಕಾರ್ಯದರ್ಶಿ (ಪ್ರಭಾರ)

---

ತೆರೆದ–ಅಂಚೆ

ಖಾತೆ ಸಂಖ್ಯೆ :

ಗೆ,

ಶ್ರೀಮತಿ/ಶ್ರೀ ____________________

____________________

____________________

ಅಂಚೆ ವಿಲೇವಾರಿಯಾಗದಿದ್ದಲ್ಲಿ ಈ ಕೆಳಗಿನ ವಿಳಾಸಕ್ಕೆ ಹಿಂತಿರುಗಿಸಿ :
**ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ**
ಮೊದಲನೇ ಮಹಡಿ, ಹಳೆಯ ಕೆ.ಜಿ.ಐ.ಡಿ ಕಟ್ಟಡ,
ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು–560 001.

# ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ

**ಮೊದಲನೇ ಮಹಡಿ, ಹಳೆಯ ಕೆ.ಜಿ.ಐ.ಡಿ ಕಟ್ಟಡ, ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು–560 001.**

## ಚುನಾವಣಾ ವೇಳಾಪಟ್ಟಿ

ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿ, ಮೊದಲನೇ ಮಹಡಿ, ಹಳೆಯ ಕೆ.ಜಿ.ಐ.ಡಿ ಕಟ್ಟಡ, ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು – 560001 ಇದರ ಚುನಾವಣಾ ದಿನಾಂಕದಿಂದ 05 ವರ್ಷಗಳ ಅವಧಿಗೆ ಆಡಳಿತ ಮಂಡಳಿಗೆ ನಿರ್ದೇಶಕರನ್ನು ಚುನಾಯಿಸಲು ಸಹಕಾರ ಸಂಘಗಳ ಜಂಟಿ ನಿಬಂಧಕರು(ಚುನಾವಣೆಗಳು) ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಆದೇಶ ಸಂಖ್ಯೆ : ಸಚುಪ್ರಾ/ಬೆಂ/ಜಂ.ನಿ/ಆಮಂಚು–ರಿನೇ/79/ 2024–25, ದಿನಾಂಕ : 30/08/2024 ಆದೇಶದನ್ವಯ ರಿಟರ್ನಿಂಗ್ ಅಧಿಕಾರಿ ನೇಮಿಸಲಾಗಿದೆ, ಸದರಿ ಆದೇಶದನ್ವಯ **ದಿನಾಂಕ : 22/09/2024 ಭಾನುವಾರ** ದಂದು ಚುನಾವಣೆ ನಡೆಸಲು ಉದ್ದೇಶಿಸಿ ಈ ಕೆಳಕಂಡಂತೆ ಚುನಾವಣಾ ವೇಳಾಪಟ್ಟಿ ಮತ್ತು ಸೂಚನೆಗಳನ್ನು ನೀಡಿರುತ್ತೇನೆ.

| ಕ್ರ. ಸಂ. | ವಿವರ | ದಿನಾಂಕ/ದಿನ ಮತ್ತು ವೇಳೆ |
|---|---|---|
| 1. | ನಾಮಪತ್ರ ಸಲ್ಲಿಕೆ ಪ್ರಾರಂಭ | **ದಿನಾಂಕ : 09/09/2024 ಸೋಮವಾರ** ಬೆಳಿಗ್ಗೆ 10.30 ರಿಂದ 3.00 ಗಂಟೆಯವರೆಗೆ (ಸಂಘದ ಕಛೇರಿಯಲ್ಲಿ) |
| 2. | ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಂದ ನಾಮಪತ್ರಗಳನ್ನು ರಿಟರ್ನಿಂಗ್ ಅಧಿಕಾರಿಯವರಿಗೆ ಅಥವಾ ಅಧಿಕಾರ ಪಡೆದವರಿಗೆ ಸಲ್ಲಿಸಲು ಕಡೆಯ ದಿನಾಂಕ 14(ಎ) | **ದಿನಾಂಕ:14/09/2024 ಶನಿವಾರ** ಬೆಳಿಗ್ಗೆ 10.30ರಿಂದ 3.00 ಗಂಟೆಯವರೆಗೆ (ಸಂಘದ ಕಛೇರಿಯಲ್ಲಿ) |
| 3. | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ 14(ಬಿ) | **ದಿನಾಂಕ:15/09/2024 ಭಾನುವಾರ** 11.00 ಗಂಟೆಯ ನಂತರ(ಸಂಘದ ಕಛೇರಿಯಲ್ಲಿ) |
| 4. | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ 14ಬಿ(4) | **ದಿನಾಂಕ:15/09/2024 ಭಾನುವಾರ** ನಾಮಪತ್ರಗಳ ಪರಿಶೀಲನೆ ನಂತರ (ಸಂಘದ ಕಛೇರಿಯಲ್ಲಿ) |
| 5. | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ (ನಿಯಮ– 14ಸಿ) | **ದಿನಾಂಕ:16/09/2024 ಸೋಮವಾರ** ಮಧ್ಯಾಹ್ನ:03:00 ಗಂಟೆಯವರೆಗೆ (ಸಂಘದ ಕಛೇರಿಯಲ್ಲಿ) |
| 6. | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ– 14 ಡಿ) | **ದಿನಾಂಕ:16/09/2024 ಸೋಮವಾರ** ಮಧ್ಯಾಹ್ನ:03:00 ಗಂಟೆಯ ನಂತರ (ಸಂಘದ ಕಛೇರಿಯಲ್ಲಿ) |

| | | |
|---|---|---|
| 7. | ಅಗತ್ಯವಿದ್ದಲ್ಲಿ ಅಭ್ಯರ್ಥಿಗಳಿಗೆ, ರಿಟರ್ನಿಂಗ್ ಅಧಿಕಾರಿಗಳಿಂದ ಚುನಾವಣಾ ಚಿಹ್ನೆಗಳನ್ನು ಹಂಚಿಕೆ (ನಿಯಮ– 14ಇ) ಮಾಡಿ ಚಿಹ್ನೆ ಸಹಿತ ಸ್ಪರ್ಧೆಯಲ್ಲಿರುವ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | **ದಿನಾಂಕ:16/09/2024 ಸೋಮವಾರ** ಮಧ್ಯಾಹ್ನ:03:00 ಗಂಟೆಯ ನಂತರ (ಸಂಘದ ಕಛೇರಿಯಲ್ಲಿ) |
| 8. | ಮತದಾನದ ದಿನಾಂಕ ಮತ್ತು ಸಮಯ ಮತ್ತು ಸ್ಥಳ | **ದಿನಾಂಕ:22/09/2024 ಭಾನುವಾರ** ಬೆಳಿಗ್ಗೆ 09:00 ಗಂಟೆಯಿಂದ ಸಾಯಂಕಾಲ 4:00 ಗಂಟೆವರೆಗೆ ಸ್ಥಳ : **ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ,** ನಂ.28, ಸಿಲ್ವರ್ ಜ್ಯೂಬಿಲಿ ಬಿಲ್ಡಿಂಗ್, ರೇಸ್ ಕೋರ್ಸ್ ಅಡ್ಡ ರಸ್ತೆ, ಹಳೆಯ ಜೆ.ಡಿ.(ಎಸ್) ಕಛೇರಿ ಹತ್ತಿರ, ಆನಂದ್ ರಾವ್ ಸರ್ಕಲ್, ಬೆಂಗಳೂರು–560009 |
| 9. | ಮತಗಳ ಎಣಿಕೆ ಹಾಗೂ ಚುನಾವಣಾ ಫಲಿತಾಂಶ ಪ್ರಕಟಣೆ | ದಿನಾಂಕ:22/09/2024 ಭಾನುವಾರ ದಂದು ಮತದಾನದ ನಂತರ |

**ಸೂಚನೆಗಳು**

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಪ್ರಕರಣ 65 ರನ್ವಯ ಸಂಘದ ಕಾರ್ಯಕಾರಿ ಮಂಡಳಿಗೆ ಒಟ್ಟು 15(ಹದಿನೈದು) ನಿರ್ದೇಶಕರನ್ನು ಚುನಾಯಿಸಬೇಕಾಗಿರುತ್ತದೆ. ಈ ಪೈಕಿ 01(ಒಂದು) ಸ್ಥಾನವನ್ನು ಪರಿಶಿಷ್ಟ ಜಾತಿಗೆ, 01(ಒಂದು) ಸ್ಥಾನವನ್ನು ಪರಿಶಿಷ್ಟ ಪಂಗಡಕ್ಕೆ, 01(ಒಂದು) ಸ್ಥಾನವನ್ನು ಹಿಂದುಳಿದ ವರ್ಗದ ಪ್ರವರ್ಗ "ಎ" ಗೆ, 01(ಒಂದು) ಸ್ಥಾನವನ್ನು ಹಿಂದುಳಿದ ವರ್ಗದ ಪ್ರವರ್ಗ "ಬಿ" ಗೆ ಹಾಗೂ 02(ಎರಡು) ಸ್ಥಾನವನ್ನು ಮಹಿಳೆಯರಿಗೆ ಮೀಸಲಿರಿಸಲಾಗಿದೆ. ಉಳಿದ 09(ಒಂಬತ್ತು) ಸ್ಥಾನಗಳು ಸಾಮಾನ್ಯ ಸ್ಥಾನಗಳಾಗಿರುತ್ತವೆ. ಸದಸ್ಯರು ತಮ್ಮ ನಾಮಪತ್ರದಲ್ಲಿ ಯಾವ ಸ್ಥಾನಕ್ಕೆ ಸ್ಪರ್ಧೆ ಬಯಸಲಾಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಪ್ರವರ್ಗ–ಎ, ಮತ್ತು ಹಿಂದುಳಿದ ವರ್ಗದ ಪ್ರವರ್ಗ–ಬಿ ದಿಂದ ಸ್ಪರ್ಧಿಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಜಾತಿ ದೃಢೀಕರಣವನ್ನು ಪಡೆದು ನಾಮಪತ್ರದೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು

3. ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 14ರ ಪ್ರಕಾರ ಚುನಾವಣೆಗೆ ಸ್ಪರ್ಧಿಸಲು ಇಷ್ಟಪಡುವ ಉಮೇದುವಾರರು ಚುನಾವಣೆಯಲ್ಲಿ ಮತ ಚಲಾಯಸುವ ಅರ್ಹತೆ ಹೊಂದಿರುವ ಒಬ್ಬ ಸದಸ್ಯರ ಸೂಚನೆಯೊಂದಿಗೆ ನಾಮಪತ್ರವನ್ನು ಸಲ್ಲಿಸಬೇಕು. ಅನರ್ಹ ಸದಸ್ಯರ ಸಹಿಯೊಂದಿಗೆ ಸೂಚಿಸಿದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

4. ಒಬ್ಬ ಸದಸ್ಯ ಒಬ್ಬ ಅಭ್ಯರ್ಥಿಯನ್ನು ಮಾತ್ರ ಸೂಚಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸಿದ್ದಲ್ಲಿ, ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

5. ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ರ ನಿಯಮ 14 ಎ ರನ್ವಯ ಅಭ್ಯರ್ಥಿಗಳು ಯಾವುದಾದರು ಒಂದು ಮತಕ್ಷೇತ್ರಕ್ಕೆ ಸ್ಪರ್ಧಿಸಿ ನಾಮಪತ್ರವನ್ನು ಸಲ್ಲಿಸಬೇಕಾಗುತ್ತದೆ. ಒಂದಕ್ಕಿಂತ ಹೆಚ್ಚಿನ ಮತಕ್ಷೇತ್ರಗಳಿಗೆ ನಾಮಪತ್ರಗಳನ್ನು ಸಲ್ಲಿಸಿದ್ದಲ್ಲಿ ಎರಡು ನಾಮಪತ್ರಗಳನ್ನು ತಿರಸ್ಕೃತಗೊಳ್ಳುವುದು.

6. ನಾಮಪತ್ರಗಳ ಪರಿಶೀಲನೆ ವೇಳೆಯಲ್ಲಿ ಅಭ್ಯರ್ಥಿಗಳು ಹಾಜರಿರಬಹುದು.

7. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, ನಿಯಮ ಮತ್ತು ಬೈಲಾ ಪ್ರಕಾರ ನಿರ್ದೇಶಕ ಮಂಡಳಿಗೆ ಆಯ್ಕೆಯಾಗಬೇಕಾದಲ್ಲಿ ಅಗತ್ಯವಾಗಿ ಇರಬೇಕಾದ ಅರ್ಹತೆಗಳನ್ನು ಹೊಂದಿರತಕ್ಕದ್ದು.

8. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, ನಿಯಮ ಮತ್ತು ಬೈಲಾ ಪ್ರಕಾರ ನಿರ್ದೇಶಕ ಮಂಡಳಿಗೆ ಆಯ್ಕೆಯಾಗಬೇಕಾದಲ್ಲಿ ಯಾವುದೇ ಅನರ್ಹತೆಗಳನ್ನು ಹೊಂದಿರತಕ್ಕದ್ದಲ್ಲ.

9. ಉಮೇದುವಾರಿಕೆ ಅರ್ಜಿಯನ್ನು ಸಲ್ಲಿಸುವಾಗ ಚುನಾವಣಾ ಠೇವಣಿ ಬಾಬ್ತು ರೂ.2000/– (ಎರಡು ಸಾವಿರ) ಗಳನ್ನು ನಗದಾಗಿ ಅಥವಾ ಪೇ ಆರ್ಡರ್ ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಸಂಘದ ಹೆಸರಿನಲ್ಲಿ ಸಲ್ಲಿಸತಕ್ಕದ್ದು. ಪರಂತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಪ್ರವರ್ಗ–ಎ ಹಾಗೂ ಮಹಿಳಾ ಸದಸ್ಯರಿಗೆ ಶೇ.50 ರಷ್ಟು ಅಂದರೆ 1000/– ಗಳನ್ನು ನಗದಾಗಿ ಅಥವಾ ಪೇ ಆರ್ಡರ್ ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಸಂಘದ ಹೆಸರಿನಲ್ಲಿ ಸಲ್ಲಿಸತಕ್ಕದ್ದು.

10. ಉಮೇದುವಾರಿಕೆ ಅರ್ಜಿಗಳ ಪರಿಶೀಲನೆ ವೇಳೆ ಅಭ್ಯರ್ಥಿಗಳು ಅಥವಾ ಸೂಚಕರು ಮಾತ್ರ ಹಾಜರಿರಬಹುದು. ಯಾವ ಸದಸ್ಯನೂ ಒಂದು ಮತಕ್ಷೇತ್ರಕ್ಕಿಂತ ಹೆಚ್ಚಿನ ಮತಕ್ಷೇತ್ರಕ್ಕೆ ಅಭ್ಯರ್ಥಿಯಾಗಿರತಕ್ಕದ್ದಲ್ಲ ಹಾಗು ಯಾವ ಸದಸ್ಯನೂ ಒಂದೇ ಮತಕ್ಷೇತ್ರದಿಂದ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ.

11. ಉಮೇದುವಾರಿಕೆ ಅರ್ಜಿಗಳನ್ನು ಕಛೇರಿ ವೇಳೆಯಲ್ಲಿ ಸಂಘದ ಕಛೇರಿಯಲ್ಲಿ ಪಡೆಯಬಹುದು.

12. ಉಮೇದುವಾರಿಕೆ ಅರ್ಜಿಯನ್ನು ನಾಮನಿರ್ದೇಶಕರಿಂದ ಸೂಚಿಸಿಕೊಂಡು ಅಭ್ಯರ್ಥಿಯು ಘೋಷಣೆಯೊಂದಿಗೆ ತಮ್ಮ ಇತ್ತೀಚಿನ ಭಾವಚಿತ್ರ ಲಗತ್ತಿಸಿ ಸಹಿ ಮಾಡಿ ಸಲ್ಲಿಸುವುದು.

13. ಉಮೇದುವಾರಿಕೆ ವಾಪಸ್ಸಾತಿ ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ಅಭ್ಯರ್ಥಿಯು ಖುದ್ದಾಗಿ ಸಂಘದ ಕಛೇರಿಗೆ ಬಂದು ರಿಟರ್ನಿಂಗ್ ಆಧಿಕಾರಿಯವರಿಗೆ ಅಥವಾ ಅಧಿಕಾರ ಪಡೆದವರಿಗೆ ನಿಗಧಿತ ಸಮಯದೊಳಗೆ ಸಲ್ಲಿಸುವುದು.

14. 1960 ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 14(ಇ) ರ ನಿಯಮದ ಪ್ರಕಾರ ಚುನಾವಣಾಧಿಕಾರಿಗಳು/ ಮುಖ್ಯ ಚುನಾವಣಾಧಿಕಾರಿ ಭಾರತ ಸರ್ಕಾರ, ಇವರು ಅಂಗೀಕೃತ ಮಾಡಿರುವ ರಾಷ್ಟ್ರೀಯ ಪಕ್ಷಗಳ ಅಥವಾ ರಾಜ್ಯದ ಪಕ್ಷಗಳಿಗೆ (ರಿಸರ್ವೇಷನ್ ಮತ್ತು ಹಂಚಿಕೆ ಮಾಡಿರುವ) ಆದೇಶ 1968ರಂತೆ ನೀಡಿರುವ ಚಿಹ್ನೆಗಳನ್ನು ಹೊರತುಪಡಿಸಿ ಅಭ್ಯರ್ಥಿಗಳಿಗೆ ಚುನಾವಣೆ ಚಿಹ್ನೆಗಳನ್ನು ನೀಡಲು ಚುನಾವಣಾಧಿಕಾರಿಗಳಿಗೆ ಅಧಿಕಾರವಿರುತ್ತದೆ. ಚುನಾವಣಾ ಚಿಹ್ನೆ ನೀಡಿಕೆಯಲ್ಲಿ ಚುನಾವಣಾಧಿಕಾರಿಗಳದ್ದೇ ಅಂತಿಮ ತೀರ್ಮಾನವಾಗಿರುವುದು.

15. ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ಮುಗಿಯುವವರೆಗೆ ಸಾರ್ವಜನಿಕ ರಜಾ ದಿನಗಳಲ್ಲೂ ಸಂಘದ ಆಡಳಿತ ಕಛೇರಿಯು ತೆರೆದಿರುತ್ತದೆ ಮತ್ತು ಚುನಾವಣಾ ವೇಳಾಪಟ್ಟಿ ರೀತ್ಯಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

16. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಪ್ರಕಾರ ಚುನಾವಣಾ ದಿನಾಂಕಕ್ಕೆ 12 ತಿಂಗಳ ಹಿಂದೆ ಸದಸ್ಯರಾದವರು ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹರಿರುತ್ತಾರೆ.

17. ಉಮೇದುವಾರರು ಯಾವುದಾದರೂ ಒಂದು ಸ್ಥಾನಕ್ಕೆ ಮಾತ್ರ ಸ್ಪರ್ಧಿಸಲು ಅವಕಾಶವಿರುತ್ತದೆ.

18. ಸದಸ್ಯರು ಮತ ಚಲಾಯಿಸಲು ಮತಗಟ್ಟೆಗೆ ಬರುವಾಗ ಕಡ್ಡಾಯವಾಗಿ ಸಂಘವು ವಿತರಿಸಿರುವ ಗುರುತಿನ ಚೀಟಿಯನ್ನು ಹಾಜರುಪಡಿಸತಕ್ಕದ್ದು.

ಸಹಿ/–

**(ಎಸ್. ಪವನ್‌ಕುಮಾರ್)**

ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ರಿಟರ್ನಿಂಗ್ ಅಧಿಕಾರಿ
ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿ,
ಮೊದಲನೇ ಮಹಡಿ, ಹಳೆಯ ಕೆ.ಜಿ.ಐ.ಡಿ ಕಟ್ಟಡ,
ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು–560001

ಸ್ಥಳ : ಬೆಂಗಳೂರು
ದಿನಾಂಕ : 02/09/2024